ಮತ್ತೊಮ್ಮೆ ವಿಚಾರಿಸಲಾಗಿ ಎಲ್ಲಾ ದಿಕ್ಕಿನಿಂದಲೂ ಇದೊಂದು 'ರಿಪೇರಿ ಮಾಡಲಾಗದ ಐಟಂ' ಎಂಬ ಅಭಿಪ್ರಾಯವೇ ಬಂದಿತ್ತು.

ಇದಾದ ಕೆಲವೇ ಕೆಲವು ದಿನಗಳಲ್ಲಿ ಮತ್ತೆ ಅದ್ಯಾವುದೋ ಪೊಳ್ಳು ನೆಪ ಒಡ್ಡಿ ರೇಖಾಳ ಮನೆಗೆ ಮತ್ತೆ ವಿಶೇಷ ವೇಷಭೂಷಣದೊಂದಿಗೆ ಭೇಟಿಕೊಟ್ಟ ಕುದುರೆ ನಾಗರಾಜರು ಎರಡೇ ಎರಡು ನಿಮಿಷದಲ್ಲಿ ಅಲ್ಲಿಂದ ಹೊರಬಿದ್ದಿದ್ದರು. ಮೊದಲೇ ಗಟ್ಟಿ ಹೆಣ್ಣಾದ ರೇಖಾ ಅದೇನು ಗುರುಸೇವೆ ಮಾಡಿದಳೋ, ಅವರೊಂದಿಗೆ ಏನು ಮಾತಾಡಿದ್ದಳೋ, ಇವರೇನೋ ಮಾತಾಡಿದ್ದರೋ... ಆ ನಾಲ್ಕು ಗೋಡೆಗಳ ನಡುವೆ ಎರಡು ನಿಮಿಷದ ಒಳಗೆ ಅದೇನು ನಡೆಯಿತೋ ಈ ಲೋಕಕ್ಕೆ ತಿಳಿಯಲೇ ಇಲ್ಲ. ಅವತ್ತಿನಿಂದ ರೇಖಾಗೆ ದೂರದಿಂದಲೇ ಕೈಮುಗಿದು ಕಳಿಸುತ್ತಿದ್ದರು. 'ಅಕ್ಕಯ್ಯಮ್ಮ' ಎಂದೇ ಸಂಬೋಧಿಸುತ್ತಿದ್ದರು. ಲೋಕವೇ ಅರಿಯದ ಈ 'ನಾಗ-ರೇಖಾರಹಸ್ಯ'ವನ್ನು ಅದೆಂಗೋ ಭೇದಿಸಿ ಎದೆಯಲ್ಲಿಟ್ಟುಕೊಂಡು ಜೀವನ ನಡೆಯುತ್ತಿದ್ದ ಏಕೈಕ ಧೀರನೆಂದರೆ ಅದು ನಾಗರಾಜರ ಪ್ರಿಯ ಸಿಸ್ಯ ಶೇಖರಿ ಮಾತ್ರ.

* * *

ವಿ.ಸಿ.ಯ ಫೋನುಗಳು, ಅನೇಕ ನಂಬರ್‌ಗಳು ಒಂದರ ಮೇಲೊಂದು ಬಡಕೊಳ್ಳುತ್ತಿದ್ದರೆ ನಾಗರಾಜರು ಹೆದರಿ ಬೆಪ್ಪಾಗಿ ಹೋಗಿದ್ದರು. ಕಳೆದ ವಾರವಷ್ಟೇ ಆಗಿದ್ದ ಕಾನ್ವೋಕೇಷನ್‌ನಲ್ಲಿ ಡಾಕ್ಟರೇಟ್ ಸರ್ಟಿಫಿಕೇಟ್ ಪಡೆದುಕೊಂಡಿದ್ದ ರೇಖಾ ತನ್ನ ಪದವಿ ಮುಗಿಯುವವರೆಗೆ ಸುಮ್ಮನಿದ್ದು ಅದು ಮುಗಿದ ಕೂಡಲೇ ಇಂಥಾ ಬಾಂಬ್ ಸಿಡಿಸಿದಳಲ್ಲ! ಅವತ್ತು ಆ ರೂಮಿನಲ್ಲಿ ನಡೆದಿದ್ದನ್ನ ಯಾವುದಾದರೂ 'ಟ್ವೆನ್ಟಿಫೋರ್ ಇನ್ಟು ಸೆವೆನ್' ಅಂತ ಹಾಕ್ಕೊಂಡು ಕುಯ್ಯೋ ನ್ಯೂಸ್‌ನವರಿಗೆ ಕೊಟ್ಟೇ ಬಿಟ್ಟಳಾ ಅನ್ನಿಸಿತು. ಅದೂ ಅಲ್ಲದೆ ರೇಖಾ ಇವನಿಗೆ ನೀನು ರೂಮಿಗೆ ಬಂದಿದ್ದು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದೀನಿ, ನನ್ನ ಹತ್ತಿರ ಬಾಲಬಿಚ್ಚಿದರೆ ನಿಂಗೆ ಹುಟ್ಟಿದ ಹಬ್ಬ ಕಾಣಿಸ್ತೀನಿ, ಏನಂದ್ಕೊಂಡಿದ್ದೀಯಾ ನನ್ನ, ಹೌ ಡೇರ್ ಯು ಸ್ಟುಪ್ಪಿಡ್, ಗೆಟ್ ಔಟ್ ಗಟ್ಟರ್ ಸ್ನೇಕ್ ಅಂತ ಅವಾಜ್ ಇಕ್ಕಿದ್ದಳು. ಇದು ನಡೆದಾದ ಮೇಲೆ ರೇಖಾ ಒಂದಷ್ಟು ದಿನ ವಿಶ್ವವಿದ್ಯಾನಿಲಯಕ್ಕೂ ಬರದೆ ಪಿಎಚ್.ಡಿಯನ್ನು ಪಾರ್ಟ್ ಟೈಮಿಗೆ ಬದಲಾಯಿಸಿಕೊಂಡ ಮೂರೇ ತಿಂಗಳೊಳಗೆ ಕಲೋಕಿಯಂಗೆ ಕೊಟ್ಟಿದ್ದಳು. ಅವಳು ಬರೆದಿದ್ದಕ್ಕೆಲ್ಲಾ ಹಿಂದೂ ಮುಂದೂ ಏನೊಂದೂ ನೋಡದೆ ಸೈನ್ ಹಾಕಿ ಸಭ್ಯ ಎಂಬ ಟ್ರ್ಯಾಕ್ ರೆಕಾರ್ಡ್ ಉಳಿಸಿಕೊಂಡು ಕಲೋಕಿಯಂ, ವೈವಾ ಇತರ ಎಲ್ಲ ತಾಂತ್ರಿಕ ಕೆಲಸಗಳನ್ನು ಮುತುವರ್ಜಿವಹಿಸಿ ಮಾಡಿದ್ದ ನಾಗರಾಜರು 'ನಾನು ಇಷ್ಟೆಲ್ಲಾ ಮಾಡಿದ್ರುವೇ ನನಗೇ ಬತ್ತಿ ಇಕ್ಕಿದಳಲ್ಲ. ಇವಳನ್ನ ಈ ಜನ್ಮದಾಗೆ ನಂಬಬಾರದಪ್ಪೋ' ಎಂದು ಮನಸಲ್ಲೇ ಅಂದುಕೊಂಡು ತಲೆ ಅಲ್ಲಾಡಿಸಿದರು.

ಫೋನುಗಳು ತಪ್ಪದೆ ಬರುತ್ತಲೇ ಇದ್ದವು. ನಾಗರಾಜರಿಗೆ ಯಾವುದೋ ಒಂದು ಕರೆಗೆ ಉತ್ತರಿಸೋಣ ಎನ್ನಿಸಿತು. ಅಂಗೈಲಿ ಕುಣಿದಾಡುತ್ತಿದ್ದ ಅನ್ನೌನ್ ನಂಬರಿನ ಫೋನು ತೆಗೀತಿದ್ದಂಗೆ ಆ ದನಿ ಹಲೋ 'ನಾನು ಚಿಂತಾಕ್ರಾಂತಿ ಟೀವಿ ಚೀಫ್ ರಿಪೋರ್ಟರ್ ಸ್ಟೇಟ್ ಫೇಮಸ್ ಆಂಕರ್ ರುಕ್ಕಮ್ಮ ಮಾತಾಡ್ತಿರೋದು, ನೀವು ಡಾ. ಕುದುರೆ ನಾಗರಾಜರು ತಾನೇ' ಅಂದಾಗ, 'ನಮಸ್ತೆ ಮೇಡಂ, ಹೇಳಿ' ಅಂದರು. 'ನೋಡಿ ಸರ್, ನಿಮ್ಮ ಮೇಲೆ ಒಂದು ಅಪವಾದ ಇದೆ. ಇದು ಸತ್ಯವೋ ಸುಳ್ಳೋ, ನೀವು ಯಾಕೆ ನಮ್ಮ ಫೋನ್ ತೆಗೀತಿಲ್ಲ, ಯಾವುದೇ ಮಾಹಿತಿಯನ್ನ ಯಾಕೆ ಕೊಡ್ತಿಲ್ಲ, ನೀವು ನಿಮ್ಮ ಸ್ಥಾನವನ್ನ ಮರೆತು ನಡ್ಕೋತಿದ್ದೀರಾ... ಇಂಗಾದ್ರೆ ನಿಮಗೆ ಪಾಠ ಹೇಳುವ ಯಾವ ನೈತಿಕತೆ ಇರುತ್ತೆ ಹೇಳಿ... ಸರ್, ಹೇಳಿ? ನಮಗೆ ಸತ್ಯ ಬೇಕು ಸತ್ಯ' ಎಂದು ಒಂದೇ ಸಮ ಬಾಯಿ ಬಡಿದುಕೊಂಡಿದುಕೊಳ್ಳುತ್ತಿದ್ದ ಚೀಫ್ ರಿಪೋರ್ಟರ್ ಕಮ್ ಆಂಕರ್ ರುಕ್ಕಮ್ಮನ ಭಾಷೆ ಕೇಳಿ ತಣ್ಣೀರಿಗೆ ಹೆಜ್ಜೆ ತೆಗೆದ ಕಾವಿಕೋಳಿಯಂತೆ ಕಣ್ಣು ಬಿಡುತ್ತಾ ಕುಂತಿದ್ದ ನಾಗರಾಜರು 'ನೋಡಿ ಮೇಡಮ್ಮರೇ, ನೀವು ಒಬ್ಬ ಹೆಣ್ಣಾಗಿ ಇನ್ನೊಂದು ಹೆಣ್ಣಿನ ಬಗ್ಗೆ ನ್ಯಾಯ ಕೇಳೋದು ಸರಿನೇ ಆದ್ರೂ, ಆಯಮ್ಮ ಹೇಳ್ತೀರೋದೆಲ್ಲ ಸುಳ್ಳು. ನಾನು ರೇಖಮ್ಮ ಹತ್ರ ಹಾಗೆಲ್ಲಾ ನಡಕೊಂಡಿಲ್ಲ' ಅಂದರು.

ಸೈಕಾಲಜಿ ಓದಿ ಸರಿಯಾದ ಸಂಬಳ ಸಿಗದೆ ಚಿಂತಾಕ್ರಾಂತಿ ಟೀವಿಗೆ ಬಂದು ಸೇರಿಕೊಂಡಿದ್ದ ಆಂಕರಮ್ಮ ಇದ್ಯಾಕೋ ಮಿಸ್ ಹೊಡೀತಿದೆಯಲ್ಲ ಅಂದುಕೊಂಡು ತಡೀ ಒಂದ್ ಕೈ ನೋಡೇ ಬಿಡೋಣ